


ಹೊಳೆದವು. ಅವರ ನಗೆಚಾಟಿಕೆ ಗದ್ದಲದಲ್ಲಿ ಅವಲಕ್ಕಿ ಹಾರ ಒಬ್ಬರ ಕೈಯಿಂದ ಮತ್ತೊಬ್ಬರನ್ನು ದಾಟುತ್ತಿತ್ತು. ಎಲ್ಲರೂ ಅಂತಹ ಚೆಂದ ಕುಸುರಿ ಕೆಲಸ ಮಾಡಿರುವ ಕಲಾಕಾರನಿಗೆ ಶಹಬ್ಬಾಸ್ ಎನ್ನುವವರೆ. ಅದನ್ನು ತಮ್ಮ ಕೊರಳಿಗೆ ಹಾಕಿಕೊಂಡು ತಮ್ಮಷ್ಟಕ್ಕೆ ತಾವು ಮೋಹಗೊಳ್ಳುವವರೆ. ತಾನು ಹೇಗೆ ಕಾಣಿಸುತ್ತಿದ್ದೇನೆಂದು ಕಣ್ಣುಗಳಲ್ಲಿಯೆ ಮತ್ತೊಬ್ಬರಿಗೆ ಕೇಳುವವರು. ಬಹುಹೊತ್ತಿನವರೆಗೆ ಈ ಆಟ ನಡೆಯಿತು. ಮುದುಕಿಯೊಬ್ಬಳು 'ಅಲ್ರೆ, ಹೀಂಗ್ಯಾಕ ಆ ಸರಾ ಹಾಕ್ಕೊಂಡ ಮೈಮರೀಲಿಕ್ಕೆ ಹತ್ತೀರಿ. ಕೃಷ್ಣಂಗ ಮಳ್ಳ ಆದಂತ ಕತಿ ಆತಲ್ಲ ನಿಮ್ಮದು? ಹೋಗ್ರಿನ್ನ, ಚೆಂದಾಗಿ ನಡದ ಮ್ಯಾಲ ಕೊಡ ಇಟ್ಕೊಂಡು ಮನಿಗೆ ಹೋಗ್ರಿ.'

ಅಜ್ಜಿ ಏನೇ ಹೇಳಿದರೂ ಬಹಳಷ್ಟು ಜನ ಸರ ನೋಡುವುದರಲ್ಲಿಯೆ, ಅದನ್ನು ಮತ್ತೆ ಮತ್ತೆ ಮುಟ್ಟಿ ನೋಡುವುದರಲ್ಲಿಯೇ ಮಗ್ನರಾಗಿದ್ದರು. ಆ ಸರವನ್ನು ಆಚೆ ನಿಂತಿದ್ದ ಮತ್ತೊಬ್ಬಳಿಗೆ ಕೊಡುವಷ್ಟರಲ್ಲಿ ಅದು ಬಾವಿದಂಡೆಯ ಒಂದು ಕೊಡದ ಮೇಲೆ ಬಿದ್ದು ಹಾಗೆಯೆ ನೋಡನೋಡುವಷ್ಟರಲ್ಲಿ, ಹಿಡಿಯುಹಿಡಿಯುವಷ್ಟರಲ್ಲಿ ಬಾವಿಯೊಳಗೆ ಜಾರಿ ಬಿದ್ದುಬಿಟ್ಟಿತು. ಯಾರ ಕೈಯಿಂದ ಬಿದ್ದಿತು, ಯಾರು ತೆಗೆದುಕೊಳ್ಳುವವರಿದ್ದರು, ಯಾರು ಚೆಲ್ಲಿದರು, ಯಾರು ಬೀಳಿಸಿದರು, ಯಾರು ಕಸಿದುಕೊಂಡರು, ಯಾರಿಂದ ಅಲಕ್ಷ್ಯವಾಯಿತು? ಒಂದೂ ತಿಳಿಯಲಿಲ್ಲ, ಎರಡೂ ತಿಳಿಯಲಿಲ್ಲ. ಕ್ಷಣಾರ್ಧದಲ್ಲಿ ಏನೆಲ್ಲ ಘಟಿಸಿಬಿಟ್ಟಿತು, ಹೌದು! ಕ್ಷಣದೊಳಗೆ ಜೀವನದಲ್ಲಿ ಏನೆಲ್ಲ ಘಟಿಸಿಬಿಡುತ್ತದೆ! ಮಾಯಕ್ಕನ ಒಳಮನಸ್ಸಿನಲ್ಲಿ ಒಂದು ಕ್ಷಣ ಆ ಆಲೋಚನೆ ಸುಳಿದುಹೋಯಿತು! ಏನೆಲ್ಲ ಆಗಿಬಿಟ್ಟಿತು? ಇನ್ನೂ ಏನೆಲ್ಲ ಆಗುವುದಿದೆ?

ಒಂದು ಕ್ಷಣ ಆ ಬಾವಿಕಟ್ಟೆಯ ಮೇಲೆ ನೆರೆದಿದ್ದವರ ಜೀವವೆ ಹೋದಂತಾಯಿತು. ಹಾವಿನ ಮೇಲೆ ಎರಗುವ ಹದ್ದಿನಂತೆ ಇದೆಂತಹ ವಿಪತ್ತು ತಮ್ಮ ಮೇಲೆ ಬಂದೆರಗಿತು? ಸಂಭ್ರಮ ತುಂಬಿಕೊಂಡಿದ್ದವರ ಮುಖಗಳು ಕಳಾಹೀನವಾದವು. ಯಾವ ಕ್ಷಣದಲ್ಲಿ ಅವಲಕ್ಕಿ ಸರ ಬಾವಿಗೆ ಬಿತ್ತೋ, ಆ ಗಳಿಗೆಯಿಂದ ಅಲ್ಲಿದ್ದವರು ಒಬ್ಬೊಬ್ಬರಾಗಿ ಖಾಲಿಯಾಗತೊಡಗಿದರು. ನಿಮಿಷದ ಹಿಂದೆ ತುಂಬಿ ತುಳುಕುತ್ತಿದ್ದ ಬಾವಿಕಟ್ಟೆ ಅಪಾಯ ಸಂಭವಿಸುತ್ತಲೇ ಸಂಪೂರ್ಣ ಖಾಲಿಯಾಯಿತು. ತಾವು ಅಲ್ಲಿ ಇರಲೆ ಇಲ್ಲವೇನೋ ಎನ್ನುವಂತೆ ದೂರಿಂದಲೆ ಏನಾಯ್ತೆಂದು ಕೆಲವರು ಕೇಳುತ್ತಿದ್ದರು. ಮಾಯಕ್ಕನ ಕಣ್ಣಿಂದ ದಳದಳ ನೀರು. ಗೌರವ್ವ, ಸಾಂವಕ್ಕ ತಾವು ಯಾಕಾದರೂ ಅವಳ ಕೊರಳಿಂದ ಅದನ್ನು ತೆಗೆಸಿದೆವೇನೋ ಎನ್ನುವ ಪಾಪಪ್ರಜ್ಞೆಯಲ್ಲಿದ್ದರು. ಅವರ ಕಣ್ಣಿಂದ ಬಳಬಳನೆ ನೀರು ಹರಿಯುತ್ತಿದ್ದವು. ಮಾಯಕ್ಕನ ಕೊರಳನ್ನು ಅಲಂಕರಿಸಿದ್ದ ಆ ಸರ ಈಗ ಅವಳ ಮತ್ತು ತಮ್ಮ ಕೊರಳಿಗೆ ಕುತ್ತು ತಂದಿತೇನೋ ಎಂದು ಹೆದರಿದರು. ಇದು ಯಾವ ಕೇಡಿನ ಮುನ್ಸೂಚನೆಯೋ ಏನೋ? ಗಂಡನ ಸಿಟ್ಟು ಮಾಯಕ್ಕನ ಕೊರಳನ್ನೆ ಬೇಡಿದರೇನು ಮಾಡುವುದು? ಹೇಗಾದರೂ ಮಾಡಿ ಈ ವಿಷಯ ಅವಳ ಮನೆ ಮುಟ್ಟದಂತೆ ನೋಡಿಕೊಳ್ಳಬೇಕು! ಮಾಯಕ್ಕನೂ ಅದೇ ಯೋಚನೆಯಲ್ಲಿದ್ದಳು. ಅಷ್ಟರಲ್ಲಿ ಯಾರೋ ಒಬ್ಬರು ನಾಗಪ್ಪನಿಗೆ ಸುದ್ದಿ ಮುಟ್ಟಿಸಿದ್ದರು. ಮಾಯಕ್ಕನ ಆಪತ್ಕಾಲಕ್ಕೆ ಮೊದಲಿನಿಂದಲೂ ಆದವನೆಂದರೆ ನಾಗಪ್ಪ. ಆತ ತಾನು ಸತ್ತಾದರೂ ಇವಳನ್ನು ಉಳಿಸುತ್ತಾನೆ! ಅವನ ಎದೆ ಬಗೆದರೆ ಅಲ್ಲಿ ಭಯ ಭಕ್ತಿಯಿಂದ ಪೂಜಿತಳಾದ ಮಾಯಕ್ಕನೆ ಕಾಣುತ್ತಾಳೆಂದು ಕೆಲವರು ಗೌಪ್ಯವಾಗಿ ಆಡಿಕೊಳ್ಳುವುದು ಈಗ ಅಷ್ಟೇನೂ ಗೌಪ್ಯವಾಗಿ ಉಳಿದಿರಲಿಲ್ಲ.

## ಕಳೆದ ಸಂಚಿಕೆಯಲ್ಲಿ...

ಮಲ್ಲೂರಿನಲ್ಲಿ ಪರಿಸರ ದಿನಾಚರಣೆ ಆಚರಿಸಿ ಆರಳಿಗಿಡ ನೆಟ್ಟ ಮಾಯಕ್ಕ ಮನೆಮಾತಾದಳು. ಹತ್ತು ಮಂದಿಯಿಂದ ನೂರು ಮಂದಿಗೆ ಉಪಕಾರವಾದರೆ ಎಲ್ಲರೂ 'ನೆನಸ್ತಾರ' ಎಂಬ ಮಾಯಕ್ಕನ ಗಿಡನೆಡುವ ಸುದ್ದಿ ಎಲ್ಲ ಪತ್ರಿಕೆಗಳಲ್ಲಿ ರಾರಾಜಿಸಿತು. ಬಸ್ಸಿನಲ್ಲಿ ಈ ಸುದ್ದಿಯನ್ನು ಹೊತ್ತ ಪತ್ರಿಕೆಯನ್ನು ಜನ ಓದುವಾಗ ಎಲ್ಲ ಪ್ರಯಾಣಿಕರು ಕಿವಿಯಾಗುವರು, ಪುಳಕಗೊಳ್ಳುವರು. ಊರ ಹಿರಿಯರು ಮಲ್ಲೂರಿನ ಸುದ್ದಿ ಪೇಪರ್‌ನಲ್ಲಿ ಬಂದಿದ್ದನ್ನು ಬರೆದಿಡುವ ಹವ್ಯಾಸವನ್ನೂ ಬೆಳೆಸಿಕೊಂಡಿದ್ದರು. ಮಲ್ಲೂರಿನ ಹೆಸರು ಖ್ಯಾತಿಗೊಂಡಂತೆ ಮಾಯಕ್ಕನ ಮೇಲೆ ದ್ವೇಷ ಸಾಧಿಸುವ ಮಂದಿಯೂ ಹುಟ್ಟಿಕೊಂಡರು. ಮಾಯಕ್ಕ ಪಂಚಾಯಿತಿ ಅಧ್ಯಕ್ಷೆಯಾದ ಮೇಲೆ ಉಡುವ ಸೀರೆಯ ಮಾದರಿ ಸೀರೆಯನ್ನೇ ಹೆಂಗಸರು ಉಡಲಾರಂಭಿಸಿದರು. 'ಮಾಯಕ್ಕನ ಸೀರೆ' ಎಂಬ ಬ್ರ್ಯಾಂಡೇ ಹುಟ್ಟಿಕೊಂಡಿತು. ಸೀರೆ ವ್ಯಾಪಾರಿ ಲಕ್ಷ್ಮೀಕಾಂತ ಇದರ ಪ್ರಚಾರದಲ್ಲಿ ತೊಡಗಿದ. ಬೈಲಹೊಂಗಲದಲ್ಲಿ ಹೊಸ ಸೀರೆ ಮಳಿಗೆಯನ್ನು ಮಾಯಕ್ಕ ಉದ್ಘಾಟನೆ ಮಾಡಿ ಬಂದಳು. ಮಲ್ಲೂರಿನಲ್ಲಿ ಒಂದೊಂದು ಹಾಸ್ಯಪ್ರಸಂಗಗಳೂ ನಡೆಯುತ್ತಿದ್ದವು. ಇದರಲ್ಲಿ ಹಲ್ಲುಕೀಳುವ ಪ್ರಸಂಗವೂ ಒಂದಾಗಿತ್ತು.



ನಾಗಪ್ಪ ಬಂದ ಕೂಡಲೆ ಬಾವಿಕಟ್ಟೆಯ ಗಜಿಬಿಜಿ ಮತ್ತೆ ಮೊದಲಿನಂತಾಯಿತು. ನಾಗಣ್ಣನಿಗೆ ಕೆಲವರು ಸಲಹೆ ಕೊಡತೊಡಗಿದರು. ಹಾಗೆ ಮಾಡು ಹೀಗೆ ಮಾಡು, ಅಲ್ಲಿ ಕಾಲಿಡು ಇಲ್ಲಿ ಕೈಯಿಡು, ಮೈ ಹಗುರ ಬಿಡು ಆಗಾಗ ಉಸಿರು ತಗೋ ಎಂದೆಲ್ಲ ಅವನಿಗೆ ನಿರ್ದೇಶನ ಕೊಡತೊಡಗಿದ್ದರು. ಬೆನ್ನಿಗೆ ಹಗ್ಗ ಕಟ್ಟಿಕೊಂಡು, ದಡದಡನೆ ಮೆಟ್ಟಿಲು ಇಳಿದಂತೆ ಬಾವಿಯ ಗೋಡೆಗಳ ತೂತುಗಳಲ್ಲಿ ಅಲ್ಲೊಂದು, ಇಲ್ಲೊಂದು ಕಾಲು ಇಡುತ್ತ ಆತ ಇಳಿದ. ಎಷ್ಟೋ ಹೊತ್ತು ಆತ ಮುಳುಗಿ ಏಳದೆ ಇದ್ದಾಗ ಮೇಲೆ ಅವನ ಸಲುವಾಗಿ ಉಸಿರು ಬಿಗಿ ಹಿಡಿದು ನಿಂತವರಿಗೆ ಆತಂಕವಾಯಿತು. ಈಗ ಮಾಯಕ್ಕ ಮತ್ತು ಅಲ್ಲಿ ನೆರೆದಿದ್ದ ಅನೇಕರಿಗೆ ಆ ಬಂಗಾರದ ಸರ ಬಿಟ್ಟು ನಾಗಪ್ಪನ ಚಿಂತೆ ಹತ್ತಿತು. ಅವರ ಪ್ರಾರ್ಥನೆ ದೇವರಿಗೆ ಕೇಳಿಸಿತೆಂಬಂತೆ ಆತ ನೀರಿನಿಂದ ನಗುತ್ತಲೆ ಎದ್ದ. ಒಮ್ಮೆ ಅವನ ಉದ್ದ ತಲೆಗೂದಲನ್ನು ಝಾಡಿಸಿದ. ಆ ನೀರಿನ ಹನಿಗಳು ಮುತ್ತುಗಳಂತೆ ಹೊಳೆದವು. ಯಾವ ಕಡೆ ತೋಯ್ದು ತಲೆ ತಿರುಗಿಸುತ್ತಾನೋ ಆ ಕಡೆ ಅವನ ಕೂದಲಿನ ಬೈತಲೆ ಬಿದ್ದು ಆತ ಎಷ್ಟೆಲ್ಲ ಜಾದೂ ಮಾಡುತ್ತಾನಲ್ಲ ಎನಿಸುತ್ತಿತ್ತು. ಅವನ ಕೈಯಲ್ಲಿ ಅವಲಕ್ಕಿ ಸರದೊಂದಿಗೆ ಇನ್ನೂ ಕೆಲವು ಸಾಮಾನುಗಳು ಹೊಳೆಯುತ್ತಿದ್ದವು. ಹಿತ್ತಾಳೆಯ ಗಿಂಡಿ, ನೆಗ್ಗಿದ ತಾಮ್ರದ ಸಣ್ಣ ಬಿಂದಿಗೆ, ಬೆಳ್ಳಿಯ ಉಡದಾರ! ಅವುಗಳ ವಾರಸುದಾರರು ಇಷ್ಟು ದಿನ ಎಲ್ಲಿದ್ದರೋ ಏನೋ? ಅದು ತಮ್ಮದು, ಇದು ತಮ್ಮದು ಎಂದು ಗುಂಪುಗೂಡಿದರು.

ಮಾಯಕ್ಕನ ಕಣ್ಣುಗಳು ತಾವು ಕಳೆದುಕೊಂಡಿದ್ದ ಕಾಂತಿಯನ್ನು ಸದ್ದಿಲ್ಲದೆ ಗಳಿಸಿಕೊಂಡಿದ್ದವು. ತನ್ನ ಕಣ್ಣಿನಲ್ಲಿ ಕಾಣಿಸಿಕೊಂಡ ಕಾಂತಿ ಕನ್ನಡಿಯಿಲ್ಲದೆಯೂ ಅವಳಿಗೆ ಗೋಚರಿಸಿತು! 'ಏನೋ ನಾಗಣ್ಣ, ಬಾಳ ಧೈರ್ಯದಾಂವ ನೀನೂ. ಅಂತೂ ಪಾತಾಳ ಮುಟ್ಟಿ ಬಂದೆ ಅನ್ನು.' ಸಾಂವಕ್ಕ ಕೇಳಿದಳು.

'ಬರೇ ಪಾತಾಳ ಒಂದೇ ಅಲ್ಲ ಸಾಂವಕ್ಕ. ಪಾತಾಳ ದಾಟಿ ಇನ್ನೂ ನಾಲ್ಕೈದು ಲೋಕ ಇದ್ದವು. ಅಲ್ಲಿಗೂ ಹೋಗಿ ಬಂದೆ. ಅದಕ್ಕೆ ಸ್ವಲ್ಪ ತಡ ಆತು.'

'ಹೂಂ. ನೀನೂ ಸೇರಿಗೆ ಸವ್ವಾ ಸೇರು ಅಲ್ಲನ? ಒಂದ ಊರಿಗೆ ಹೋಗಿ ಬಾ ಅಂದ್ರ ನಾಲ್ಕೈದು ಕಡೆ ಹೋಗಿ ಬರಾಂವ.'

'ಹೌದು ಯಕ್ಕಾ. ನಾನೂ ಬಿಡಲೇ ಇಲ್ಲ. ಹೆಂಗಾದ್ರೂ ಪಾತಾಳಕ್ಕ ಬಂದೇನಿ. ಉಳಿದ ಊರುಗಳು ಸೈತ ಇಲ್ಲೇ ಹತ್ರ ಅದಾವು ಅನಿಸ್ತು. ಅದಕ್ಕ ಅತಳ, ವಿತಳ, ಸುತಳ, ತಳಾತಳ, ರಸಾತಳ, ಮಹಾತಳಕ್ಕೂ ಹೋಗಿ ಬಂದೆ'. ಅವನ ನಗುವಲ್ಲಿ ಅಲ್ಲಿ ಕೂಡಿದ್ದವರೆಲ್ಲರ ನಗುವೂ ಸೇರಿತ್ತು.

'ಅಲ್ಲಿ ಯಾರಾದ್ರೂ ಸಿಕ್ಕಿದ್ರೇನು?'

'ಸಿಕ್ಕಿದ್ರು ಅಕ್ಕ. ಆದರ ನಾ ಮಾತಾಡಿದ್ದು ಅವರಿಗೆ ತಿಳಿತಿರಲಿಲ್ಲ. ಅವರು ಏನಂದ್ರ ಅನ್ನೋದು ನನಗ ಗೊತ್ತಾಗ್ತಾ ಇರಲಿಲ್ಲ.'

'ಮಾತಾಡೋದು ಎದಕ ಬೇಕಿತ್ತು? ಯಾರಾದ್ರೂ ನಾಗಕನ್ನೆಯನ್ನ ಹುಡುಕ್ಕೋಬೇಕಿತ್ತು. ಹುಡುಗಿ ಮಾತಾಡಿಸಲಿಕ್ಕೆ ಕಣ್ಣಿನ ಭಾಷೇನೆ ಸಾಕಾಗಿತ್ತಲ್ಲ?' ಅವನ ಓಣಿಯಲ್ಲಿನ ಗೌರಿ ಕಾಲೆಳೆದಳು. (ಸಶೇಷ)